ಶ್ರೀ ಕೆ. ಶ್ರೀನಿವಾಸಗೌಡ :— ಕೋರ್ಟಿನಲ್ಲಿ ವಕಾಲತ್ತು ಮಾಡುವವರಿಗೇ ಹೀಗೆ ಮರೆತು ಹೋದರೆ ಹೇಗೆ?

(ಗೊಂದಲ)

ಶ್ರೀ ಡಿ.ಬಿ. ಚಂದ್ರೇಗೌಡ :— ಮಾನ್ಯ ಅಧ್ಯಕ್ಷರೆ, ತಾವು ತೀರಾ ಲಿಬರಲ್ ಆಗಿಬಿಡುತ್ತೀರಿ. ಇದರಿಂದ ನಮಗೆ ಬಹಳ ಕಷ್ಟವಾಗುತ್ತದೆ.

ಶ್ರೀ ಡಿ.ವಿ. ಸದಾನಂದಗೌಡ :— ಇದಕ್ಕೆ ಕಾರಣ ಇದೆ. ನಾವು ಕಳೆದ ಹಲವಾರು ದಿವಸಗಳಿಂದ ಶೂನ್ಯ ವೇಳೆಯಲ್ಲಿ ಅನೇಕ ವಿಷಯಗಳನ್ನು ಪ್ರಸ್ತಾಪ ಮಾಡಿದ್ದೇವೆ. ಆದರೆ ಒಂದಕ್ಕೂ ಉತ್ತರ ಕೊಡುತ್ತಿಲ್ಲ. ಆದ್ದರಿಂದ ಯಾವುದು ಎಂದು ಅವರಿಗೆ ಗೊತ್ತಾಗುತ್ತಿಲ್ಲ.

ಅಧ್ಯಕ್ಷರು :— ಅವರು ಹೇಳುತ್ತಿದ್ದಾರೆ.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ :— ನಾನು ಸುಮಾರು ಶೂನ್ಯ ವೇಳೆಯ ಸೂಚನೆಗಳನ್ನು ಕಳಿಸಿದ್ದೇನೆ. ಆದರೆ ನಮಗೆ ಇಲ್ಲಿಯವರೆಗೂ ಲಿಸ್ಟ್ ಬಂದಿಲ್ಲ.

ಅಧ್ಯಕ್ಷರು :— ಲಿಸ್ಟ್ ಕಳಿಸುವುದಿಲ್ಲ. ನೀವು ಕೇಳಿ.

(ಉ) ಬೆಂಗಳೂರು ನಗರದ ವಿವಿಧ ಬಡಾವಣೆಗಳ ಸರ್ಕಾರಿ ವಸತಿಗೃಹಗಳು ಖಾಲಿಯಾಗಿರುವುದು.

ಶ್ರೀ ಕೆ.ಎನ್. ಸುಬ್ಬಾರೆಡ್ಡಿ (ಬಸವನಗುಡಿ) :— ಮಾನ್ಯ ಲೋಕೋಪಯೋಗಿ ಮಂತ್ರಿಗಳು ಗಮನಿಸಬೇಕು. ಅನೇಕ ಏರಿಯಾಗಳಲ್ಲಿ ಕ್ವಾರ್ಟರ್ಸ್‌ಗಳು ಹಾಗೆಯೇ ಖಾಲಿ ಇವೆ. ಅವುಗಳನ್ನು ಇದುವರೆಗೂ ಭರ್ತಿ ಮಾಡಿಲ್ಲ ಯಾರಿಗೂ ಕೊಡುತ್ತಿಲ್ಲ. ಇದಕ್ಕೆ ಏನು ಕಾರಣ ಎಂದು ನಾನು ಕೇಳಿದ್ದೇನೆ. ಅದಕ್ಕೆ ಉತ್ತರ ಕೊಟ್ಟಿಲ್ಲ.

ಅಧ್ಯಕ್ಷರು :— ಉತ್ತರ ಹೇಳುತ್ತಾರೆ.

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಮಂತ್ರಿ) :— ಅಧ್ಯಕ್ಷರೇ, ಎ ಗ್ರೂಪ್ ಆಫೀಸರ್ಸ್ ಕ್ವಾರ್ಟರ್ಸ್ ಇರತಕ್ಕಂಥಾದ್ದು 681. ಅದರಲ್ಲಿ 15 ಖಾಲಿ ಇವೆ. ಬಿ, ಸಿ, ಡಿ, ಗ್ರೂಪ್ ಎಂಪ್ಲಾಯೀಸ್‌ಗೆ ಸೇರಿದ್ದು 1,806 ಇದ್ದು, ಅದರಲ್ಲಿ ಖಾಲಿ ಇರತಕ್ಕಂಥಾದ್ದು 30. ದಿನಾಂಕ 4.9.2000ರಂದು ಮತ್ತು 8.5.2000ರಂದು ಸಭೆ ನಡೆದಿದೆ. ಮತ್ತೊಂದು ಸಾರಿ ನವೆಂಬರ್ 23ರಂದು ಡಿವಿಜನಲ್ ಕಮಿಷನರ್ ಅವರು

ಮೀಟಿಂಗ್‌ನ್ನು ಕರೆಯುತ್ತಾರೆ. ಈ ಖಾಲಿ ಇರತಕ್ಕಂಥ ಕ್ವಾರ್ಟರ್ಸ್‌ನ್ನು ಅಲಾಟ್‌ಮೆಂಟ್ ಮಾಡುತ್ತೇವೆ.

(ಊ) ಉತ್ತರ ಕರ್ನಾಟಕದಲ್ಲಿ ಹೈಕೋರ್ಟ್ ಬೆಂಚ್ ಕುರಿತು.

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) :— ಮಾನ್ಯ ಅಧ್ಯಕ್ಷರೆ, ಬಹಳ ದಿವಸಗಳಿಂದ ನಾವು ಈ ಸದನದಲ್ಲಿ ಒಂದು ವಿಚಾರವನ್ನು ಪ್ರಸ್ತಾಪ ಮಾಡಬೇಕೆಂದು ತಮ್ಮ ಗಮನಕ್ಕೆ ತಂದಿದ್ದೇವೆ. ಇವತ್ತು ತಾವು ಅದಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಸದನ ಇನ್ನು ಒಂದು ದಿವಸ ಅಥವಾ ಎರಡು ದಿವಸಗಳಲ್ಲಿ ಮುಗಿಯಬೇಕಾಗಿದೆ. ಇದು ಬಹಳ ಮಹತ್ವದ ವಿಚಾರ. ಮಾನ್ಯ ವಿರೋಧ ಪಕ್ಷದ ನಾಯಕರು ಸಹಿತ ಇದನ್ನು ಚರ್ಚೆಗೆ ಬಯಸಿದ್ದರು. ನಮಗೆ ಇಲ್ಲಿ ಅರ್ಥವಾಗದೇ ಇರತಕ್ಕಂಥಾದ್ದು ಏನೆಂದರೆ, ಇದರ ಬಗ್ಗೆ ಸರ್ಕಾರದ ಖಚಿತ ನಿಲುವು ಏನು? ಇದರ ಬಗ್ಗೆ ನಾವು ಇಲ್ಲಿ ಸದನದಲ್ಲಿ ಸಾಕಷ್ಟು ಚರ್ಚೆ ಮಾಡಿದ್ದೇವೆ. ಸುಮಾರು ಎರಡು-ಮೂರು ತಿಂಗಳಿಂದ ಉತ್ತರ ಕರ್ನಾಟಕದ ವಕೀಲರುಗಳು ಹೈಕೋರ್ಟ್ ಬೆಂಚ್ ಬಗ್ಗೆ ಧರಣಿ ಸತ್ಯಾಗ್ರಹ, ಪ್ರತಿಭಟನೆ ಸಹಿತ ಮಾಡಿದ್ದಾರೆ. ಸರ್ಕ್ಯೂಟ್ ಬೆಂಚ್ ಮಾಡುತ್ತೇವೆ ಎನ್ನತಕ್ಕಂಥಾದ್ದನ್ನು ಸಹಿತ ತಾವು ಹೇಳಿದ್ದೀರಿ. ಈಗ ಹೊಸದಾಗಿ ಮುಖ್ಯ ನ್ಯಾಯಾಧೀಶರು ಕೂಡ ಬಂದಿದ್ದಾರೆ. ಇದರ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ನಮಗೆ ಗೊತ್ತಾಗಬೇಕು. ಸರ್ವಪಕ್ಷಗಳ ನಿಯೋಗವನ್ನು ಸಹಿತ ತೆಗೆದುಕೊಂಡು ಹೋಗೋಣ ಎಂದು ಹೇಳಿದ್ದೀರಿ. ಈ ದೇಶದ ಪ್ರಧಾನಿಯವರನ್ನು ಸಹ ಭೇಟಿ ಮಾಡತಕ್ಕಂಥ ಮಾತನ್ನು ಕೂಡ ಹೇಳಿದ್ದೀರಿ. ಕೇಂದ್ರ ಸರ್ಕಾರದ ಕಾನೂನು ಸಚಿವರನ್ನು ಭೇಟಿ ಮಾಡತಕ್ಕಂಥ ವಿಚಾರವನ್ನು ಸಹಿತ ಹೇಳಿದ್ದೀರಿ. ಇಡೀ 16-17 ಜಿಲ್ಲೆಗಳ ಜನರು ಇವತ್ತು ಆ ಬಗ್ಗೆ ಬಹಳ ಕಾತರರಾಗಿದ್ದಾರೆ. ಕೇಂದ್ರ ಸರ್ಕಾರದವರು ಮೂರು-ನಾಲ್ಕು ಹೊಸ ರಾಜ್ಯಗಳನ್ನು ಸೃಷ್ಟಿಮಾಡಿ, ಹೊಸ ಹೈಕೋರ್ಟುಗಳನ್ನು ಮಾಡಿ, ಹೊಸ ರಾಜ್ಯಪಾಲರನ್ನು ಎಲ್ಲಾ ನೇಮಕ ಮಾಡಿದ್ದಾರೆ. ಕರ್ನಾಟಕ ರಾಜ್ಯದ ಜನ ಇಷ್ಟೊಂದು ಭಾರೀ ಪ್ರಮಾಣದಲ್ಲಿ ಪ್ರತಿಭಟನೆ ಮಾಡಿರತಕ್ಕಂಥ ಸಂದರ್ಭದಲ್ಲಿ ಸಹಿತ ಏನೋ ಡಾ: ರಾಜಕುಮಾರ್ ಪ್ರಕರಣ ಇತ್ತು, ಹಾಗಾಗಿ ಇದನ್ನು ಮುಂದೆ ಹಾಕಿಕೊಂಡು ಬಂದಿದ್ದೀರಿ. ಆದರೆ ಇದರ ಬಗ್ಗೆ ಸರ್ಕಾರದ ನಿಲುವು ಏನು? ಕರ್ನಾಟಕ ಹೈಕೋರ್ಟಿಗೆ ಹೊಸ ಮುಖ್ಯ ನ್ಯಾಯಾಧೀಶರು ಬಂದಿದ್ದಾರೆ. ಆ ಮುಖ್ಯ ನ್ಯಾಯಾಧೀಶರಿಗೆ ತಾವು ಪತ್ರವನ್ನು ಬರೆದಿದ್ದೀರಾ? ಈ ಎಲ್ಲಾ ವಿಚಾರಗಳನ್ನು ಸದನಕ್ಕೆ ತಿಳಿಸಬೇಕಾಗುತ್ತದೆ. ಏಕೆಂದರೆ ನಾವು ಪ್ರವಾಸಕ್ಕೆ ಹೋದಂಥ ಸಂದರ್ಭದಲ್ಲಿ ಉತ್ತರ ಕರ್ನಾಟಕದ ಜನ ಸಹಿತ ಇದರ ಬಗ್ಗೆ ಬಹಳ ತೀವ್ರವಾದ ಆಕ್ರೋಶವನ್ನು ಇಟ್ಟುಕೊಂಡಿದ್ದಾರೆ. ಅಲ್ಲಿರತಕ್ಕಂಥ ಬಾರ್‌ಗಳು ಮತ್ತು ಇಲ್ಲಿ ಆಡಳಿತ ಪಕ್ಷದಲ್ಲಿರತಕ್ಕಂಥ ಮಂತ್ರಿಗಳು ಸಹಿತ ಒಬ್ಬೊಬ್ಬರು ಒಂದೊಂದು ಹೇಳಿಕೆಯನ್ನು ಕೊಡುತ್ತಿದ್ದಾರೆ. ಬಾರ್ ಅಸೋಸಿಯೇಶನ್‌ನವರು ಅವರವರೇ